# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಎಂ ಉಮಾಮಹೇಶ, ನಿವೃತ ಕಾರ್ಯದರ್ಶಿ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 214 2 (ಬಿ) (ii) ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ಜಿಎಲ್‌ಬಿ/2304/2015/ಡಿಆರ್‌ಇ–5, ದಿ:14.03.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ:08.03.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಈ ದೂರನ್ನು ಶ್ರೀ ಕೆ. ಹೊನ್ನೂರಬಿ ಗಂಡ ಇಮಾಂ ಸಾಹೇಬ್, ಅಮ್ಮನಕೇರಿ ಗ್ರಾಮ ಕಕ್ಕುಪ್ಪಿ ಅಂಚೆ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಎಂ ಉಮಾಮಹೇಶ, ನಿವೃತ ಕಾರ್ಯದರ್ಶಿ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಶ್ರೀ ಎಂ. ಷಣ್ಮುಖಪ್ಪ, ಕರವಸೂಲಿಗಾರ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2. ದೂರುದಾರರು ತಮ್ಮ ದೂರಿನಲ್ಲಿ ಸರ್ಕಾರದಿಂದ ಮಂಜೂರಾದ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗೆ ಸಹಾಯಧನ ನೀಡದೆ 2000 ರೂ ಗಳನ್ನು ಲಂಚ ಕೇಳುತ್ತಿದ್ದಾರೆ. ಜಾತಿ ಭೇದ ಮಾಡುತ್ತಾರೆ 5–6 ತಿಂಗಳುಗಳಿಂದ ಕಛೇರಿಗೆ ಅಲೆದಾಡಿಸಿ ತೊಂದರೆ ಕೊಡುತ್ತಿದ್ದಾರೆಂದು ಆರೋಪಿಸಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1 ನೇ ಎದುರುದಾರರ ಹೆಸರು ಸರಿಯಾಗಿರಲಿಲ್ಲ ಅದನ್ನು ಸರಿಪಡಿಸಿಕೊಂಡು ನೋಟೀಸು ಕಳುಹಿಸಿದಾಗ ನೋಟೀಸನ್ನು ತಿರಸ್ಕರಿಸಿದ್ದಾರೆ. 2 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪಂಚಾಯಿತಿಯಿಂದ ಕಾಮಗಾರಿ ಪ್ರಾರಂಭಿಸಲು ದೂರುದಾರರಿಗೆ ಆದೇಶ ನೀಡಲಾಗಿತ್ತು. ಕಾಮಗಾರಿ ಪರಿಶೀಲಿಸಲು ಸ್ಥಳಕ್ಕೆ ಭೇಟಿ ನೀಡಿದಾಗ 3 ವರ್ಷಗಳ ಹಿಂದೆ ನಿರ್ಮಿಸಿಕೊಂಡಿದ್ದ ಹಳೆಯ ಶೌಚಾಲಯವನ್ನು ತೋರಿಸಿ ಸಹಾಯಧನ ಕೊಡುವಂತೆ ಕೇಳಿಕೊಂಡರು ಲಿಖಿತ ರೂಪದಲ್ಲಿ ಅವರ ಮನವಿಯನ್ನು ತಿರಸ್ಕರಿಸಲಾಗಿದೆ. ದೂರುದಾರರು ಇದರಿಂದ ಕೋಪಗೊಂಡು ಮನಬಂದಂತೆ ಮಾತನಾಡಿದರು ಒಟ್ಟು 126 ಜನರಿಗೆ ಸಹಾಯಧನವನ್ನು ಪಾವತಿ ಮಾಡಲಾಗಿದೆ ಯಾರಿಂದಲೂ ಸಹ ಹಣ ತೆಗೆದುಕೊಂಡಿಲ್ಲ ಆದ್ದರಿಂದ ದೂರನ್ನು ತಿರಸ್ಕರಿಸಲು ಕೋರಿಕೊಂಡಿದ್ದಾರೆ.

4. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. 2 ನೇ ಎದುರುದಾರರು ಕೇವಲ ಬಿಲ್ ಕಲೆಕ್ಟರ್ ಆಗಿದ್ದು ಶೌಚಾಲಯದ ಫಲಾನುಭವಿಗಳ ಸಹಾಯಧನ ಕೊಡುವ ಜವಾಬ್ದಾರಿ ಇರುವ ವ್ಯಕ್ತಿಯಲ್ಲ ಆಗಿನ ಪಿ.ಡಿ.ಓ ರವರು ಡಿ. ಉಮೇಶ್ ರವರು ಅಂತ ದೂರುದಾರರು ಬರೆಸಿದ್ದರಿಂದ ಸಮಸ್ಯೆಯಾಗಿತ್ತು ನಂತರ ಅವರ ಹೆಸರು ಎಂ. ಉಮಾಮಹೇಶ್ ಅಂತ ತಿಳಿದ ಮೇಲೆ ಮುಖ ಪುಟದಲ್ಲಿ ಹೆಸರನ್ನು ತಿದ್ದುಪಡಿ ಮಾಡಿ ಅವರಿಗೆ ನೋಟೀಸನ್ನು ಕೊಡಲಾಗಿದೆ 1 ನೇ ಎದುರುದಾರರು ಅದನ್ನು ತಿರಸ್ಕರಿಸಿದ್ದಾರೆ. ದಿ:30.04.2015 ರಂದು ನಿವೃತ್ತಿ

ಹೊಂದಿರುವುದರಿಂದ ಆರ್.ಪಿ.ಎ.ಡಿ (ರಿಜಿಸ್ಟರ್ ಪೋಸ್ಟ್) ಮುಖಾಂತರ ಕಳುಹಿಸಿದ್ದ ನೋಟಿಸನ್ನು ತಿರಸ್ಕರಿಸಿದ್ದಾರೆ. ದೂರುದಾರರಿಗೆ ಮಂಜೂರಾತಿ ಆದೇಶವಾಗಿರುವುದು ದಿ:25.11.2014 ರಂದು ಇದನ್ನು ಘಟನೆ ನಡೆದ ದಿನಾಂಕ ಅಂತ ತೆಗೆದುಕೊಂಡರೂ ಸಹ 4 ವರ್ಷ ಅವಧಿ ಪರಿಮಿತಿಯಲ್ಲಿ ಬರುತ್ತದೆ. 2 ನೇ ಎದುರುದಾರರು, ದೂರುದಾರರು ಹಳೆಯ ಶೌಚಾಲಯವನ್ನು ತೋರಿಸಿದರು ಮತ್ತು ಸಹಾಯಧನ ಪಾವತಿ ಮಾಡುವಂತೆ ಕೇಳಿಕೊಂಡರು. ಅಂತ ಹೇಳುತ್ತಿದ್ದು, ಆ ಮನವಿಯನ್ನು ಲಿಖಿತ ರೂಪದಲ್ಲಿ ನಿರಾಕರಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಅಲ್ಲದೆ ಕೆ.ಇಮಾಂಸಾಬ್ ಎನ್ನುವವರ ಮನೆಗೆ ಶೌಚಾಲಯ ಕಟ್ಟಿದ ವಿಷಯದಲ್ಲಿ ಹೊನ್ನೂರು ಎನ್ನುವವರ ಸಹಿ ಮಾಡಿಸಿ ಹಣ ಕೊಡಲಾಗಿದೆ. 1ನೇ ಎದುರುದಾರರು ಈ ದೂರಿಗೆ ಯಾವುದೇ ತಕರಾರನ್ನು ಸಲ್ಲಿಸದೆ ನೋಟೀಸನ್ನು ತಿರಸ್ಕರಿಸಿರುವುದರಿಂದ ದೂರಿನ ಅಂಶಗಳನ್ನು ಅಲ್ಲಗಳೆಯುವ ಯಾವುದೇ ಪ್ರಯತ್ನವನ್ನು ಮಾಡದೇ ಉದ್ಧಟತನ ತೋರಿಸಿದ್ದಾರೆ. ಆದ್ದರಿಂದ 1 ಮತ್ತು 2 ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ. ಆದ್ದರಿಂದ 1 ಮತ್ತು 2 ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ 1966 ರ ನಿಯಮ 3(1) (i) (ii) ಮತ್ತು (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಹಾಗೂ 1 ನೇ ಎದುರುದಾರರು ಈಗಾಗಲೇ ದಿ:30.04.2015 ರಂದು ತಮ್ಮ ಸೇವೆಯಿಂದ ವಯೋನಿವೃತ್ತಿಯಾಗಿದ್ದು, 1 ನೇ ಎದುರುದಾರರ ವಿರುದ್ಧ ಶಿಸ್ತು ನಡುವಳಿಕೆ ಹೂಡಲು ಮತ್ತು ಕರ್ನಾಟಕ ನಾರೀಕ ಸೇವಾ (ನಡತೆ) ನಿಯಮಗಳು 1957 ರ ನಿಯಮ 214 (2) (ಬಿ)(i) ರಡಿಯಲ್ಲಿ ಮಂಜೂರಾತಿ ನೀಡುವುದರ ಜೊತೆಗೆ ನಿಯಮ 14-ಎ ರ ಅಡಿಯಲ್ಲಿ 1 ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹಾಗೂ 2 ನೇ ಎದುರುದಾರರ ವಿರುದ್ಧ ಶಿಸ್ತು ನಡುವಳಿಕೆ ಹೂಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂದ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಈ ಹಿನ್ನೆಲೆಯಲ್ಲಿ ಶ್ರೀ ಎಂ ಉಮಾಮಹೇಶ, ನಿವೃತ್ತ ಕಾರ್ಯದರ್ಶಿ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ನಿವೃತ್ತ ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (i) (ii) ಮತ್ತು (iii) ರಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) 1957 ರ ನಿಯಮ 214 (2) (ಬಿ) (i) ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 214 (2) (ಬಿ) (i) ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/247/ಗ್ರಾಪಂಕಾ/2017 ಬೆಂಗಳೂರು, ದಿನಾಂಕ- 31-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ ಉಮಾಮಹೇಶ, ನಿವೃತ ಕಾರ್ಯದರ್ಶಿ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು

1957ರ ನಿಯಮ 214 (2) (ಬಿ) (i) ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಷರಾ: ಪುಟ ಸಂಖ್ಯೆ: 1 ರಿಂದ 38).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೂಡ್ಲಗಿ ತಾಲ್ಲೂಕು, ಮತ್ತು ಬಳ್ಳಾರಿ ಜಿಲ್ಲೆ.
6. ಶ್ರೀ ಎಂ ಉಮಾಮಹೇಶ, ನಿವೃತ ಕಾರ್ಯದರ್ಶಿ, ಮೊರಬ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.